ಕಥೆ

# ಕ್ರೈಮ್ ಸೀನ್




ತೆಲುಗು ಮೂಲ: **ಕಲ್ಪನಾ ರೆಂಟಾಲ**

ಕನ್ನಡಕ್ಕೆ: **ರಂಗನಾಥ ರಾಮಚಂದ್ರ ರಾವು**

ಚಿತ್ರ: ಪ್ರಭಾಕರ ಹೆಗಡೆ

ಕೆಂಪು ಕಾರ್ಪೆಟ್ ಮೇಲೆ ಬಿಳಿಶೀಟ್. ಕೋಣೆಯ ತುಂಬಾ ಹರಡಿದ ಹಚ್ಚ ಹಸಿರು ಬೆಳಕು. ಶೀಟ್‌ನ ಒಂದು ಬದಿಯಲ್ಲಿ ತಿಳಿನೀಲಿ ಬಣ್ಣದ ಡ್ರೆಸ್‌ನಲ್ಲಿ ನರ್ಸ್ ಪ್ರಾಕ್ಟೀಷನರ್ ಡಯಾನಾ. ಟೇಬಲ್ ಮೇಲೆ ಬೇಕಾಗಿರುವ ಎಲ್ಲಾ ವಸ್ತುಗಳು ಸಿದ್ಧವಾಗಿವೆ. ಈ ಎಕ್ಸಾಮಿನೇಷನ್ ಪ್ರೊಸೆಸನ್ನು ಡಯಾನಾ ಮತ್ತೊಂದು ಸಲ ಹೇಳುತ್ತಿದ್ದಂತಯೇ ಶ್ರಿಯಾ ಕಂಗಾಲಾಗಿ ನೋಡಿದಳು. 'ಸಪೋರ್ಟ್‌ಗಾಗಿ ಅಡ್ವೋಕೇಟ್ ಕೌನ್ಸಲರ್ ಯಾರಾದರೂ ಬರ್ತಾರಾ?' ಎಂದಿದ್ದಕ್ಕೆ ಯಾರೂ ಇಲ್ಲವೆಂದು ತಲೆಯಾಡಿಸಿದಳು ಶ್ರಿಯಾ.

ನೆಲದಮೇಲೆ ಹರಡಿರುವ ಶೀಟ್ ತೋರಿಸಿದಳು ಡಯಾನಾ.

'ಪ್ಲೀಜ್, ಅದರಮೇಲೆ ನಿಂತು, ನಿಮ್ಮ ಮೈಮೇಲಿನ ಉಡುಗೆಯನ್ನು ನಿಧಾನವಾಗಿ ಕೆಳಗೆ ಹಾಕಿರಿ.'

ಈ ಮಾತಿನಿಂದ ಶ್ರಿಯಾಳ ಮುಖ ಚಿಕ್ಕದಾಯಿತು. ಅಪರಿಚಿತರ ಮುಂದೆ ಬೆತ್ತಲೆಯಾಗಿ ನಿಲ್ಲಬೇಕೆಂಬ ಭಾವನೆಗೆ ಮುಖ ಬಿಳಿಚಿಕೊಂಡಿತು. 'ಸ್ವಲ್ಪ ತಿಳಿವಳಿಕೆ ಬಂದನಂತರ, ಅಮ್ಮನೂ ನನ್ನನ್ನು ಹೀಗೆ ನೋಡಿಲ್ಲ' ಎಂದು ಭಾವಿಸುತ್ತಿರುವಾಗಲೇ ಒಳಗಿನಿಂದ ಒತ್ತಿಬಂದ ದುಃಖ, ಕಣ್ಣುಗಳಿಂದ ನೀರು, ನಾಚಿಕೆಯಿಂದ ಕುಗ್ಗಿಹೋದಳು. ಮೈಯೆಲ್ಲಾ ಸಣ್ಣದಾಗಿ ನಡುಕ.

'ಇದು ತಪ್ಪುವುದಿಲ್ಲವೇ' ಎಂದು ಕೇಳುತ್ತಿರುವಂತೆ ನೋಡುತ್ತಿರುವ ಶ್ರಿಯಾಳ ಮನಃಸ್ಥಿತಿಯನ್ನು ಅರ್ಥ ಮಾಡಿಕೊಳ್ಳುತ್ತಾ, 'ಟೇಕ್ ಯುವರ್ ಟೈಮ್. ನಾನು ಈ ಕಡೆ ತಿರುಗಿ ನಿಲ್ಲುತ್ತೇನೆ' ಪ್ರೊಫೆಷನಲ್ಲಾಗಿ, ಆದರದಿಂದ ಮಾತನಾಡುತ್ತಿದ್ದಾಳೆ ಡಯಾನಾ 'ಯಾವ ಕ್ಷಣವಾದರೂ ಸರಿ, ಈ ಎಕ್ಸಾಮಿನೇಷನ್ ಬೇಡವಾದರೆ ಹೇಳಿ, ಕೂಡಲೇ ಬಿಟ್ಟುಬಿಡುತ್ತೇನೆ.' ಡಯಾನಾ ಎಷ್ಟೇ ಸಹಾನುಭೂತಿಯಿಂದ ಮಾತನಾಡುತ್ತಿದ್ದರೂ ಶ್ರಿಯಾ ಒಳಗೊಳಗೇ ಮುದುಡಿಕೊಳ್ಳುತ್ತಿದ್ದಳು.

ಹಾಸ್ಪಿಟಲ್ ಫ್ರಂಟ್ ಡೆಸ್ಕ್‌ನಲ್ಲಿ ನಡೆದ ವಿಷಯವನ್ನು ಹೇಳಿದ ನಂತರದಿಂದ ಎಲ್ಲರ ಕಣ್ಣುಗಳಲ್ಲಿಯೂ ಮರುಕ, ಸಹಾನುಭೂತಿ. ಅವರ ಮಾತುಗಳಲ್ಲಿ ಮತ್ತಿಷ್ಟು ಹೆಚ್ಚಾಗಿ ತೋರುವ ಮರ್ಯಾದೆ. 'ಆರ್ ಯು ಓಕೆ?' ಎಂದು ಎಲ್ಲರೂ ಮತ್ತೆ ಮತ್ತೆ ಕೇಳುತ್ತಿದ್ದರೆ, I am not ok ಎಂದು ಗಟ್ಟಿಯಾಗಿ ಕಿರುಚಿಕೊಳ್ಳಬೇಕೆನಿಸುತ್ತದೆ ಶ್ರಿಯಾಗೆ. ಧೈರ್ಯ ತುಂಬಿಕೊಂಡು ಅಲ್ಲಿಯವರೆಗೆ ಬಂದಿದ್ದಳಾದರೂ ಕ್ಷಣ ಕ್ಷಣಕ್ಕೂ ಶ್ರಿಯಾಗೆ ಆ ಧೈರ್ಯ ಕುಗ್ಗಿ ಹೋಗುತ್ತಿದೆ. ಯಾರಿಗೂ ಹೇಳದೇ ಯಾರಿಗೂ ಕಾಣಿಸದೇ ಓಡಿಹೋಗಬೇಕೆನ್ನಿಸುತ್ತಿದೆ.

